# ಓಂಕಾರಿಣಿ ಅಂತರ್ಯಾಮಿನಿ

ಡಾ. ವಿಜಯಭಾರತಿ

ಭಗವಾನ್ ಶ್ರೀರಮಣರ ಕೃಪೆಗೆ ಪಾತ್ರರಾದ ವಾಸಿಷ್ಠ ಗಣಪತಿ ಮುನಿಗಳು ಉನ್ನತ ಮಟ್ಟದ ಸಾಧಕರೂ ಪ್ರಕಾಂಡ ವಿದ್ವಾಂಸರೂ, ಅಷ್ಟೇ ಅಲ್ಲದೆ ಅಪೂರ್ವ ಭಕ್ತರೂ ಆಗಿದ್ದರು. ಅವರು ರಚಿಸಿದ ದಿವ್ಯಕೃತಿ 'ಉಮಾಸಹಸ್ರಂ.' ಈ ಕುರಿತು ಪರಿಚಯಾತ್ಮಕವಾಗಿ ಬರೆದಿರುವ ಲೇಖಕಿ ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಕನ್ನಡ ಸಾಹಿತ್ಯದಲ್ಲಿ ವಿಶೇಷ ಅಧ್ಯಯನ ಮಾಡಿರುವ ಇವರು ಹಲವಾರು ಕನ್ನಡ ಗ್ರಂಥಗಳನ್ನು ರಚಿಸಿದ್ದಾರೆ. ಉತ್ತಮ ವಾಗ್ಮಿಗಳೂ ಆಗಿರುವ ಅವರು ಸಂಗೀತದಲ್ಲೂ ಪರಿಣತರು. ದೂರದರ್ಶನ, ಯೂಟ್ಯೂಬ್‌ಗಳಲ್ಲೂ ಅವರ ಅನೇಕ ಪ್ರವಚನಗಳು ಬಿತ್ತರಗೊಂಡಿವೆ.

**ಮಾ**ತೃ ಆರಾಧನೆಗೆ ನವರಾತ್ರಿಯಲ್ಲಿ ಒಂಬತ್ತು ರಾತ್ರಿಗಳನ್ನು ಸಂಕಲ್ಪಿಸಿ ಭಕ್ತಿಶ್ರದ್ಧೆಯಿಂದ ಜಗನ್ಮಾತೆಯನ್ನು ಉಪಾಸನೆ ಮಾಡುತ್ತೇವೆ. ಇದು ಸನಾತನ ಸಂಸ್ಕೃತಿಯ ಹಿರಿಮೆಯನ್ನು ಎತ್ತಿ ಹಿಡಿದಿದೆ. ದೈತ್ಯದಮನಿ, ದಾನವಧ್ವಂಸಿನಿಯಾಗಿ ಶ್ರೀದುರ್ಗಾದೇವಿ ಉಪಾಸಿತಳಾಗಿದ್ದರೆ, ಶ್ರೀಚಕ್ರದ ನವಾವರಣ ಪೂಜಾದಿಗಳಿಂದ ಶ್ರೀಲಲಿತಾದೇವಿ ಆರಾಧಿತಳಾಗಿದ್ದಾಳೆ. ಭಗವತಿಯ ಸರ್ವಸ್ವರೂಪವೂ ಹಲವಾರು ರೀತಿಯಲ್ಲಿ ನೂರಾರು, ಸಾವಿರಾರು ಭಕ್ತರಿಂದ ಈ ಪವಿತ್ರ ಸಂದರ್ಭದಲ್ಲಿ ಪೂಜಿತವಾಗುತ್ತದೆ.

ಶ್ರೀರಾಮಕೃಷ್ಣ ಪರಮಹಂಸರ ಪರಮಭಕ್ತ ಗಿರೀಶ್‌ಚಂದ್ರ ಘೋಷ್ ಒಂಬತ್ತೂ ದಿನಗಳು ತಾಯಿ ದುರ್ಗೆಯನ್ನು ಪೂಜಿಸಿ ದಶಮಿಯ ದಿನ, ವಿಸರ್ಜನೆ ನೆರವೇರಿಸುವುದು ತನ್ನಿಂದ ಸಾಧ್ಯವೇ ಇಲ್ಲ; ಭಗವತಿಯನ್ನು ನಾನು ಕಳುಹಿಸಲಾರೆ ಎಂದು ಕಂಬನಿ ಹರಿಸಿ, ಹಟಹಿಡಿದಾಗ ಪರಮಹಂಸರು ತಮ್ಮ ಸಾಂತ್ವನದ ಮಮತೆಯ ಮಾತಿನಿಂದ ಸಂತೈಸುತ್ತಾ ಹೇಳುತ್ತಾರೆ: ''ಯಾವ ತಾಯಿಯನ್ನು ಈ ವಿಗ್ರಹದಲ್ಲಿ ಪ್ರತಿಷ್ಠಾಪಿಸಿ ಪೂಜಿಸಿದ್ದೀಯಾ, ಆ ತಾಯಿಯನ್ನು ಈಗ ನಿನ್ನ ಅಂತರಂಗದಲ್ಲಿ ಪ್ರತಿಷ್ಠಾಪಿಸಿಕೊ. ನಿನ್ನೊಂದಿಗೆ ಅವಳು ಸದಾ ಇರುತ್ತಾಳೆ, ಮೂರ್ತಿಯನ್ನು ಗಂಗಾ ಮಾತೆಯ ಮಡಿಲಲ್ಲಿ ವಿಸರ್ಜಿಸು'' ಎಂದಾಗ ಮಿಂಚಿನಂತೆ ಗಿರೀಶ್ ಅವರಲ್ಲಿ ಜ್ಞಾನೋದಯವಾಗುತ್ತದೆ.

ಪರಮಹಂಸರ ಈ ಜ್ಞಾನವಾಣಿಯಲ್ಲಿ ನವರಾತ್ರಿಯ ಮಾತೃ ಆರಾಧನೆಯ ನಂತರ ಭಕ್ತನ ಅಂತರ್ಯದಲ್ಲಿ ತಾಯಿಯನ್ನು ಆವಾಹಿಸಿಕೊಂಡು ಆ ಮಹಾಮಾತೆಯ ದಿವ್ಯಸಾನ್ನಿಧ್ಯವನ್ನು ಪರಿಭಾವಿಸುವುದೇ ಮೂಲ ಉದ್ದೇಶವೆಂಬುದು ಸ್ಪಷ್ಟವಾಗುತ್ತದೆ. ಪೂಜಿಸಿದ ವಿಗ್ರಹದಲ್ಲಿದ್ದ ಮಾತೃಚೈತನ್ಯದ ದಿವ್ಯಸ್ವರೂಪ ಹೃದಯಪೀಠದಲ್ಲಿ ಸ್ಥಿರವಾಗಿ ನೆಲೆಸಿ ನಮ್ಮನ್ನು ಸತ್ಪಥದಲ್ಲಿ ಮುನ್ನಡೆಸಬೇಕು.

ಕೇನೋಪನಿಷತ್ತಿನಲ್ಲಿ ಭಗವತಿ ಉಮಾಹೈಮವತಿಯ ಪ್ರಸಂಗವೇ ಈ ತತ್ತ್ವದರ್ಶನಕ್ಕೆ ಸಾಕ್ಷಿಯಾಗಿ ಮೂಡಿಬಂದಿದೆ. ಭಗವತಿ ಆದಿಶಕ್ತಿಯು ಮುಂದಿರಿಸಿದ್ದ ಒಂದು ಹುಲ್ಲುಕಡ್ಡಿಯನ್ನು ವಾಯುದೇವ ಬೀಸಿ ಎಸೆಯಲಾರದೆ ಹೋದ, ವರುಣದೇವ ಪ್ರವಹಿಸಿ ಕೊಚ್ಚಿಹಾಕಲಾರದೆ ಹೋದ, ಅಗ್ನಿದೇವ ಸುಟ್ಟು ಭಸ್ಮಮಾಡಲಾರದೆ ಹೋದ. ಎಲ್ಲ ದೇವತೆಗಳ ಶಕ್ತಿಯೂ ತಟಸ್ಥವಾದುದನ್ನು ಕಂಡು, ದೇವೇಂದ್ರ ಸತ್ಯವನ್ನರಿತು ಮಹಾಮಾತೆ ಆದಿಶಕ್ತಿಯನ್ನು ಪ್ರಾರ್ಥಿಸಿದ. ಸರ್ವಶಕ್ತಳಾದ ಜಗಜ್ಜನನಿ ಅತ್ಯಂತ ಪ್ರಕಾಶಮಾನವಾದ ಸೌದಾಮಿನಿಯಾಗಿ ನೀಲಾಕಾಶದಲ್ಲಿ ಅವನಿಗೆ ದರ್ಶನವಿತ್ತಳು. ''ಎಲ್ಲಿ ದಿವ್ಯಶಕ್ತಿಗಳ ಶಕ್ತಿಯಾದ ನನ್ನನ್ನು ವಿದ್ಯುನ್ಮಾಲಿನಿಯಾಗಿ ಯಾರು ಉಪಾಸಿಸುತ್ತಾರೋ ಅಂತಹ ಭಕ್ತರಲ್ಲಿ ತೇಜೋರೂಪದಲ್ಲಿ ಚೈತನ್ಯವಾಹಿನಿಯಾಗಿ ಬೆಳಗುತ್ತೇನೆ, ಸಂಚಲಿಸುತ್ತೇನೆ. ಸದಾ ಅವರ ಅಂತರ್ಯದಲ್ಲಿ ಸ್ಥಿತಳಾಗಿರುತ್ತೇನೆ'' ಎಂದು ತನ್ನ ಮಾತೃವಾಣಿಯ ಮೂಲಕ ಜ್ಞಾನದರ್ಶನ ಮಾಡಿಸಿದ್ದಾಳೆ.

ಶ್ರೀರಾಮಕೃಷ್ಣ ಪರಮಹಂಸರಿಗೂ ಭಗವತಿ ಭವತಾರಿಣಿಯ ದರ್ಶನಾನುಭವ ಆದದ್ದು ಮಹತ್ತರವಾದ ತೇಜೋರಾಶಿಯ ಮಹಾತರಂಗವಾಗಿಯೇ!

ಜಗನ್ಮಾತೆಯ ಇಂತಹ ಭವ್ಯಸೌದಾಮಿನೀ ಸ್ವರೂಪವನ್ನು ವರ್ಣಿಸಿ ಆ ಸ್ತೋತ್ರಲಹರಿಯ ಮೂಲಕ ಚೈತನ್ಯಮಯೀ ದೇವಿಯ ದರ್ಶನಭಾಗ್ಯ ನೀಡಿರುವ ಸ್ತುತಿಯೇ 'ಉಮಾಸಹಸ್ರಂ'. ಹೆಸರೇ ಸೂಚಿಸಿರುವಂತೆ ಸಹಸ್ರಧಾರೆಯ ಹರಿವಿನಲ್ಲಿ ಈ ಅಮೃತಲಹರಿ ಹರಿಯುತ್ತದೆ. ಕಾವ್ಯಸೌಂದರ್ಯ ಮತ್ತು ಪದಲಾಲಿತ್ಯದಿಂದ ಭಕ್ತರಿಗೆ ಭಾವತನ್ಮಯತೆಯನ್ನು ನೀಡುವ ಈ ಸ್ತೋತ್ರಲಹರಿಯನ್ನು ರಚಿಸಿದವರು ಶ್ರೀ ವಾಸಿಷ್ಠ ಗಣಪತಿ ಮುನಿಯವರು. ಪ್ರಕಾಂಡ ಪಂಡಿತರೂ, ಪ್ರಖ್ಯಾತ ವಿದ್ವಾಂಸರೂ, ದೇವೀ ಉಪಾಸಕರೂ, ಮಂತ್ರಸಿದ್ಧರೂ ಆಗಿ ವಿದ್ವತ್ ಕ್ಷೇತ್ರದಲ್ಲಿ ಅತ್ಯಂತ ಮಾನ್ಯರಾಗಿದ್ದವರು. 'ಕಾವ್ಯಕಂಠ' ಎಂದು ಸನ್ಮಾನಿತರಾಗಿದ್ದವರು. ಎಲ್ಲ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುವ ಮಾರ್ಗದಲ್ಲಿ ಅರುಣಾಚಲ ಕ್ಷೇತ್ರಕ್ಕೂ ಬಂದರು. ಅರುಣಾಚಲೇಶ್ವರ ಗಿರಿರೂಪದ ಅಗ್ನಿಲಿಂಗ ಮತ್ತು ಆಪೀನಾಂಬಾ ದೇವಿ ಅಮೃತದಾಯಿನೀ ಮಾತೆ. ಅವರೀರ್ವರ ಪುಣ್ಯಸಾನ್ನಿಧ್ಯ ಗಣಪತಿ ಮುನಿಯವರನ್ನು ಭಾವಪರವಶರನ್ನಾಗಿ ಮಾಡಿತು. ದೈವಕೃಪೆಯೇ ಆ ಸಮಯದಲ್ಲಿ ಅವರನ್ನು ಬ್ರಹ್ಮಜ್ಞಾನಿ ಶ್ರೀರಮಣ ಮಹರ್ಷಿಗಳ ದಿವ್ಯಸಾನ್ನಿಧ್ಯಕ್ಕೂ ಕರೆತಂದಿತು. ಅಲ್ಲಿಯವರೆಗೂ ರಮಣರನ್ನು ಭಕ್ತರು ಬ್ರಾಹ್ಮಣಸ್ವಾಮಿ ಎಂದೇ ಕರೆಯುತ್ತಿದ್ದರು.

ಗಣಪತಿಮುನಿಯವರೇ ಅವರ ಬ್ರಹ್ಮವರ್ಚಸ್ಸು, ನಿರ್ವಾಣ ಸ್ಥಿತಿಯ ಅವಧೂತ ಸ್ವರೂಪದ ಮಹಾಯೋಗಿಯನ್ನು ಕಂಡು ಸಾಷ್ಟಾಂಗ ನಮಸ್ಕಾರ ಸಲ್ಲಿಸಿ ಸ್ವರಚಿತ ಗುರುಸ್ತುತಿಯಿಂದ ಸ್ತುತಿಸಿ 'ಶ್ರೀರಮಣಮಹರ್ಷಿಭ್ಯೋನಮಃ' ಎಂದು ನಮಿಸಿದರು. ಅಂದಿನಿಂದ ಆ ನಾಮಾಂಕಿತವೇ ಭಕ್ತರೆಲ್ಲರ ಬಾಯಲ್ಲಿ ಶಾಶ್ವತವಾಯಿತು.

ಶ್ರೀವಿದ್ಯಾ ಉಪಾಸಕರ ಮನೆತನದಲ್ಲಿ ಜನಿಸಿ ಉಪಾಸನೆ ಮಂತ್ರಸಿದ್ಧಿ ಇವೇ ಸರ್ವಸ್ವವಾಗಿದ್ದ ಗಣಪತಿಮುನಿಗಳಲ್ಲಿ ಭಗವತ್ ಸಾಕ್ಷಾತ್ಕಾರದ, ಆತ್ಮಸಿದ್ಧಿಯ ಹಂಬಲವಿತ್ತು. ಗುರು ರಮಣರಲ್ಲಿ ಅದನ್ನು ನಿವೇದಿಸಿಕೊಂಡರು. ''ನನ್ನ ಅಂತರಾತ್ಮದ ದರ್ಶನ ಪಡೆವ ಶ್ರೇಷ್ಠ ತಪಸ್ಸು ಯಾವುದು? ಮಾರ್ಗದರ್ಶನ ನೀಡಿ'' ಎಂದು ಕೋರಿದರು. ಶ್ರೀರಮಣರ ಮೌನಮುಖದಲ್ಲಿ ಬೆಳಗುತ್ತಿದ್ದ ತೇಜೋನಯನಗಳಿಂದ ಕೃಪಾಧಾರೆ ಹರಿದು ಗಣಪತಿ ಮುನಿಯವರ ಆಂತರ್ಯದಲ್ಲಿ ದಿವ್ಯಭಾವ ಉಗಮಿಸಿತು. ಶ್ರೀರಮಣರ ಗಂಭೀರವಾಣಿ ''ನಿನ್ನಲ್ಲಿರುವ ಸಾಧಕ ಯಾರು? ಈ ಶೋಧನೆಯೇ ನಿಜವಾದ ತಪಸ್ಸು. ಅದೇ ಆತ್ಮಸಿದ್ಧಿಯ ಪಥ'' ಎಂದು ಬೋಧಿಸಿತು. ಆ ಮಾತೇ ಜ್ಯೋತಿರ್ಮಂತ್ರವಾಗಿ ಸಾಕ್ಷಾತ್ಕರದ ಸಿದ್ಧಿಯ ಕಡೆಗೆ ಅವರನ್ನು ಮುನ್ನಡೆಸಿತು. ಅರುಣಾಚಲೇಶ್ವರನ ಅರ್ಧನಾರೀಶ್ವರ ಸ್ವರೂಪದಲ್ಲಿದ್ದ ಉಮಾ ಮಹೇಶ್ವರಿಯ ಸಾಕ್ಷಾತ್ಕಾರಕ್ಕಾಗಿ ತಪಸನ್ನಾಚರಿಸಲು ನಿರ್ಧರಿಸಿದರು. ಶ್ರೀರಮಣಮಹರ್ಷಿಗಳೇ ಅರುಣಗಿರಿಯ ಆಮ್ರಗುಹೆಯಲ್ಲಿ ತಪಸ್ಸನ್ನಾಚರಿಸಲು ಆದೇಶ ನೀಡಿದರು. ಅವರ ಕೃಪಾಶೀರ್ವಾದದಿಂದ ತಪಸ್ಸು ೨೧ ದಿನಗಳವರೆಗೆ ಏಕಪ್ರಕಾರವಾಗಿ ನಡೆಯಿತು. ಪ್ರತಿನಿತ್ಯ ರಚಿಸಿ, ಧ್ಯಾನಿಸಿ, ನುತಿಸಿದ ಪವಿತ್ರ ಸ್ತೋತ್ರ ಲಹರಿಯೇ 'ಉಮಾಸಹಸ್ರಂ'. ಇದು ಒಂದು ಸಾವಿರ ಶ್ಲೋಕ, ೪೦ ಸ್ತಬಕಗಳಲ್ಲಿ , ೪೦ ರೀತಿಯ ವಿನೂತನ ಛಂದಸ್ಸಿನಲ್ಲಿದೆ. ೨೫ ಶ್ಲೋಕ ಸರಣಿ, ಒಂದೊಂದು ಪುಷ್ಪಗುಚ್ಛವಾಗಿ ಭಗವತಿಗೆ ಸಮರ್ಪಿತವಾಗಿದೆ. ಸ್ತೋತ್ರಲಹರಿಯ ಉದ್ದಕ್ಕೂ ಶ್ರೀರಮಣರ ಕೃಪಾಧಾರೆಯೇ ಅಂತರ್ವಾಣಿಯಾಗಿ, ರಚಿಸುವ ಹಸ್ತದಲ್ಲಿ ಚೈತನ್ಯದ ಧಾರೆಯಾಗಿ ಹರಿದ ದಿವ್ಯಾನುಭವ ವಾಸಿಷ್ಠಗಣಪತಿ ಮುನಿಗಳಿಗೆ ಆಯಿತು. ಅದರ ಅನುಭವವನ್ನು ಪದ್ಯಗಳ ಮೂಲಕ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. ನಾನು ಲಿಪಿಕಾರ , ಅವರೇ ಕರ್ತೃ ಎಂದಿದ್ದಾರೆ. ಶ್ರೀರಾಮಕೃಷ್ಣರಿಗೆ ಹೇಗೆ ಭವತಾರಿಣಿಯೇ ಪರಬ್ರಹ್ಮ ಸ್ವರೂಪಿಣಿಯಾದಳೋ ಹಾಗೆ ಶ್ರೀರಮಣಮಹರ್ಷಿಗಳು ಅರುಣಾಚಲೇಶ್ವರನ ಅಂತರ್ಯಾಮಿನಿಯಾದ ಅಪೀತಾಂಬ ಉಮಾಮಹೇಶ್ವರಿಯಲ್ಲಿ ಪರಬ್ರಹ್ಮ ಸ್ವರೂಪಿಣಿಯನ್ನು ಕಂಡಿದ್ದರ ದಿವ್ಯಾನುಭವವೇ ಗಣಪತಿ ಮುನಿಗಳು ರಚಿಸಿದ ಸ್ತೋತ್ರಲಹರಿಯಲ್ಲಿ ತರಂಗತರಂಗವಾಗಿ ಉಗಮಿಸಿದೆ.

ಭಗವತಿಯ ಸರ್ವಸ್ವರೂಪದವರ್ಣನೆಯೂ ಇದರಲ್ಲಿ ಮೂಡಿ ಬಂದಿದೆ. ದುರ್ಗಾಸಪ್ತಶತಿಯಲ್ಲಿನ ದೈತ್ಯದಮನಿ, ಸಪ್ತ ಮಾತೃಕಾ, ಶ್ರೀಚಕ್ರಸ್ಥಿತೆ, ಶ್ರೀಲಲಿತಾ ತ್ರಿಪುರಸುಂದರಿ, ದಶ ಮಹಾವಿದ್ಯಾ ಸ್ವರೂಪ, ದೇವೀ ತೀರ್ಥಕ್ಷೇತ್ರಗಳಲ್ಲಿನ ವಿವಿಧ ದೇವೀ ಸ್ವರೂಪ, ಅರ್ಧನಾರೀಶ್ವರ ಸ್ವರೂಪ ಇವೆಲ್ಲವೂ ವರ್ಣಿತವಾಗಿದೆ.

ಆದರೆ ಅತ್ಯಂತ ಪ್ರಮುಖವಾಗಿ ವರ್ಣಿತವಾಗಿರುವುದು ಪ್ರಾಣಸ್ವರೂಪಿಣಿ ಚೈತನ್ಯಸ್ವರೂಪಿಣಿ, ವಿದ್ಯುನ್ಮಾಲಿನಿ, ಸೌದಾಮಿನೀ ದೇವಿಯ ಅಂತರ್ಯಾಮಿನೀ ಸ್ವರೂಪ; ಇದೇ ಇಲ್ಲಿ ಕಾಣುವ ವಿಶೇಷತೆ. ಭಗವಂತ ಮೇಘೇಶ್ವರನಾಗಿ ಕಾಣಿಸಿ ಅಲ್ಲಿ ಹೊಳೆಯುವ ಮಿಂಚೇ ಭಗವತಿ ಸೌದಾಮಿನಿಯಾಗಿ ಸಾಧಕನಿಗೆ ಕಾಣಿಸಿಕೊಳ್ಳುತ್ತಾಳೆ. ಇದನ್ನೇ ಧರ್ಮಮೇಘ ಸಿದ್ಧಿ ಎಂದು ಪತಂಜಲಿ ಮಹರ್ಷಿಗಳು ತಿಳಿಸುತ್ತಾರೆ. ಸೃಷ್ಟಿಯಲ್ಲಿರುವ ಸೋಮ ಸೂರ್ಯಾಗ್ನಿ ಸಂಗಮವೇ ವಿದ್ಯುತ್ ಆಯಸ್ಕಾಂತ ಶಕ್ತಿ. ಶಿವ ಪುರಾಣದಲ್ಲಿ ಸಾಕ್ಷಾತ್ ಶಿವನೇ ಪಾರ್ವತಿದೇವಿಗೆ ಈ ಸತ್ಯ ದರ್ಶನವನ್ನು ವ್ಯಕ್ತಪಡಿಸಿದ್ದಾನೆ. ''ಅಹಂ ಅಗ್ನಿಶಿರೋ ನಿಷ್ಠಃ ತ್ವಂ ಸೋಮ ಶಿರಸಿ ಸ್ಥಿತಾ ಇದಂ ಸೋಮಸೂರ್ಯಾಗ್ನಿಮಯಂ ವಿಶ್ವಂ ಆವಾಭ್ಯಾಂ ಸಮಧಿಕ್ಷಿತಂ'' ಇಡೀ ವಿಶ್ವವನ್ನು ವ್ಯಾಪಿಸಿ, ಸಂಚಲನ ಶಕ್ತಿಯಾಗಿ ನಿರಂತರವೂ ಹರಿದಿರುವ ಸಂವಿದಗ್ನಿಯ ವಿಶ್ವಸ್ವರೂಪ ದರ್ಶನವೇ 'ಉಮಾಸಹಸ್ರಂ'. 'ಓಂಕಾರ ಸಾರ ಶಕ್ತಿಃ ಉಮಾ ಇತಿ ಪ್ರಕೀರ್ತಿತಾ' ಎಂದು ಯೋಗವಾಸಿಷ್ಠದ ಋಷಿವಾಣಿ ತಿಳಿಸುತ್ತದೆ. ಶ್ರೀರಮಣಮಹರ್ಷಿಗಳ ಕೃಪಾವರ್ಷದಿಂದ ಗಣಪತಿಮುನಿಯವರಿಗೆ ತಪಸ್ಸಿದ್ಧಿ ಪ್ರಾಪ್ತವಾಯಿತು. ಆದರೆ ಸಾಧನೆಯ ಕೊನೆಯ ಘಟ್ಟದಲ್ಲಿ ಅವರ ಶಿರೋಮಧ್ಯದಿಂದ ಬಾಷ್ಪವಾಯು ಶ್ವೇತಧೂಮವಾಗಿ ಕಾಣಿಸಿಕೊಂಡಾಗ ರಮಣರೇ ತಮ್ಮ ಹಸ್ತವನ್ನು ಅವರ ಮಸ್ತಕದ ಮೇಲಿರಿಸಿ ಸ್ತಂಭನ ಮಾಡಿದರು. ಸಾಧನಾಪಥದಲ್ಲಿ ಇದೊಂದು ಅಪೂರ್ವ ಪ್ರಸಂಗ.

ಇಪ್ಪತ್ತೊಂದು ದಿನಗಳಲ್ಲಿ ನಿಷ್ಠೆಯಿಂದ ಭಕ್ತಿಪೂರ್ವಕವಾಗಿ ಆಚರಿಸಿದ್ದ ತಪಸ್ಸಿನ ಸಾರಸ್ವರೂಪವಾಗಿದ್ದ 'ಉಮಾಸಹಸ್ರಂ' ಸ್ತೋತ್ರಪುಷ್ಪಾಂಜಲಿಯನ್ನು ಭಗವತಿ ಅಪೀತಾಂಬಾ ಸನ್ನಿಧಿಯಲ್ಲಿ ಸಮರ್ಪಿಸಿ ಗಣಪತಿ ಮುನಿಯವರು ಧನ್ಯರಾದರು.

ಈಗಾಗಲೇ ತಿಳಿಸಿರುವಂತೆ ಈ ಸ್ತೋತ್ರಕಾವ್ಯದ ಭಾವ ಸೌಂದರ್ಯ, ಪದಲಾಲಿತ್ಯ ಸಹೃದಯ ಓದುಗರಿಗೆ, ಜ್ಞಾನ ಸಂಪನ್ನರಿಗೆ, ಭಾವುಕಭಕ್ತರಿಗೆ ದಿವ್ಯವಾದ ಒಂದು ಆನಂದ ಧಾಮದ ಯಾತ್ರೆಯೇ! ಸಂಕ್ಷಿಪ್ತವಾಗಿ ಈ ಸಹಸ್ರಸ್ತೋತ್ರ ಲಹರಿಯ ರೂಪ-ರೇಖೆಗಳನ್ನು ಒಂದಿಷ್ಟು ಪರಿಚಯಿಸಬೇಕಾಗುತ್ತದೆ. ಇದು ಲೇಖನದಲ್ಲಿ ಅವಶ್ಯವಾಗಿ ಸಲ್ಲಿಸಬೇಕಾದ ನುಡಿ ನಮನವೂ ಹೌದು!

ಮೊದಲನೆಯದಾಗಿ ಭಗವತಿಯ ಪ್ರಾಣಶಕ್ತಿಸ್ವರೂಪ. ವಾಯು ಮಂಡಲದ ಮಹಾಪ್ರಾಣವೇ ಜೀವಿಯಲ್ಲಿ ಪ್ರಾಣವಾಗಿ ಅಲ್ಲಿರುವ ವಿದ್ಯುದಗ್ನಿಯನ್ನು ಉದ್ದೀಪಿಸಿ, ಸಂರಕ್ಷಿಸುತ್ತದೆ. ಗಾಳಿ ಇಲ್ಲದೆ ಹಣತೆಯಲ್ಲಿ ದೀಪ ಬೆಳಗುವುದಿಲ್ಲ, ಹೋಮಕುಂಡದಲ್ಲಿ ಹೋಮಾಗ್ನಿ ಜ್ವಲಿಸುವುದಿಲ್ಲ, ಜೀವಿಯಲ್ಲಿ ಚೈತನ್ಯದ ಹರಿವಿಲ್ಲ. **''ಯಾತಾ ಯಾತಾ ವಿಹಾರಿಣೆ ಅಸ್ಥಿಪಂಜರಿಕಾ ಯಸ್ಮಿನ್ನಿದಂ ಶರೀರಂ ಭವತಿ ಮಹತ್ ವಿದ್ಯುದಗ್ನಿ ಯಂತ್ರಮಿಹ''**

**''ಸೂಕ್ಷ್ಮಶರೀರೇ ಕಾಂತಿಮತಿ । ಪ್ರಾಣಶರೀರೇ ಶಕ್ತಿಮತಿ ।**
**ಸ್ವಾಂತಶರೀರೇ ಭೋಗವತಿ । ಜ್ಞಾನಶರೀರೇ ಯೋಗವತಿ ।''**

**''ಮಂತ್ರಪರಾಣಾಂ ವಾಕ್ಯಬಲಂ । ಯೋಗಪರಾಣಾಂ ಪ್ರಾಣಬಲಂ।**
**ಆತ್ಮಪರಾಣಾಂ ಶಾಂತಿ ಬಲಂ । ಧರ್ಮಪರಾಣಾಂ ತ್ಯಾಗಬಲಂ ।''**

**''ಹೃದಯೇ ಹೃದಯೇ ಜೀವಂ ದೈವಂ।**
**ಶೀರ್ಷೇ ಶೀರ್ಷೇ ಧ್ಯಾಯತ್ ದೈವಂ।**
**ಚಕ್ಷುಷಿ ಚಕ್ಷುಷಿ ರಾಜತ್‌ದೈವಂ।''**

**''ನಿರಂತರ ಮಂತ್ರಜಪೇನ ಪ್ರಾಣಪ್ರದೀಪನಂ ಭವತಿ।**
**ವಿದ್ಯುದಗ್ನಿ ಪ್ರಜ್ವಲತಿ।''**

**''ಪ್ರಾಣೋಪಾಸನ ಹೋಮೇನ ಶ್ರೀಅಂಬಾಭವತಿ ಭಕ್ತಿಸುಲಭಾ।''**

ಈ ಮೇಲಿನ ಕೆಲವು ಶ್ಲೋಕಗಳ ಪರಿಚಯದಿಂದ ನಮ್ಮ ಉಸಿರಿನ ಉಚ್ಛ್ವಾಸನಿಶ್ವಾಸ ಕ್ರಿಯೆಯೇ ಹೇಗೆ ಪ್ರಾಣೋಪಾಸನೆಯಾಗಿ ಪ್ರಾಣೇಶಿಯ ಪ್ರಾಣದಾತ್ರಿಯ ಉಪಾಸನೆ ನಿರಂತರವೂ ಹೇಗೆ ನಡೆಯುತ್ತಿದೆ. ಮಹಾಪ್ರಾಣವೇ ಪ್ರಾಣವಾಗಿ ಅಂತರ್ಯಾಮಿನಿಗೆ ಅರ್ಚಕನಾಗಿರಲಿ ಎಂದು ಕವಿ ಇಲ್ಲಿ ಆಶಿಸಿದ್ದಾರೆ.

ಕ್ಷೀರಸಾಗರ ಮಥನದಿಂದ ಅಮೃತಪ್ರಾಪ್ತಿ ಆದಹಾಗೆ ನಮ್ಮಲ್ಲಿರುವ ಎಪ್ಪತ್ತೆರಡು ನಾಡಿಗಳ ಮಥನದಿಂದ ಆತ್ಮಸಿದ್ಧಿ, ಹಾಗೂ ಅಮೃತತ್ವ ಪ್ರಾಪ್ತಿಯಾಗುತ್ತದೆ ಎಂಬುದನ್ನು ಗಣಪತಿ ಮುನಿಯವರು ಅತ್ಯಂತ ಸುಂದರವಾದ ಸಾಹಿತ್ಯರೂಪಕದಿಂದ ವರ್ಣಿಸಿದ್ದಾರೆ.

**''ದಕ್ಷಿಣ ನಾಡಿ ದೇವಸೇನಾ । ವಾಮಗನಾಡಿ ದಾನವಸೇನಾ ।**

**ಮೇರುದಂಡೋ ಮಂದರ ಶೈಲಂ । ಮೂಲಸರೋಜೇ ಕಚ್ಛಪ ರಾಜ ಆನಾಪಾನಾ ವಾಸುಕಿರಜ್ಜು । ಮಂಥನ ಕೃತ್ಯಂ ಮಾಯಾ ವಿಲಾಸಂ ಶೀರ್ಷಜಧಾರಾ ಅಮೃತವರ್ಷಂ ।''**

ಇದು ಕೇವಲ ವರ್ಣನೆಯಲ್ಲ, ಶ್ರೀರಮಣರ ಕೃಪಾವರ್ಷದಿಂದ ಆದ ದಿವ್ಯಾನುಭವ. ಮೂಲಾಧಾರದ ಅಗ್ನಿಚೈತನ್ಯವೇ ಕೂರ್ಮ(ಆಮೆ) ಸ್ವರೂಪದ ಆಧಾರಶಕ್ತಿಯಾಗಿ ವಿದ್ಯುತ್ ಸ್ತಂಭವಾದ ಮೇರುದಂಡಕ್ಕೆ ಆಧಾರವಾಗುತ್ತದೆ. ಉಚ್ಛ್ವಾಸ ನಿಶ್ವಾಸವೆ ಮಂಥನದ ವಾಸುಕಿ ಆಗಿ ಯೋಗಮಾಯೆಯ ಕೃಪೆಯಿಂದ ಸಹಸ್ರಾರದಿಂದ ಅಮೃತವರ್ಷ ಹರಿಯುತ್ತದೆ.

ಇಂತಹ ಉನ್ನತ ದರ್ಶನಾನುಭವವನ್ನು ಪರಿಭಾವಿಸುವುದು ಸಾಮಾನ್ಯ ನೆಲೆಯ ಮನಸ್ಸಿಗೆ ಕಷ್ಟವಾದರೂ ಇಷ್ಟದಿಂದ ಕಷ್ಟಪಟ್ಟು ಪ್ರಯತ್ನಿಸಿದರೆ ಪರಿಭಾವನೆಗೆ ನಿಲುಕುತ್ತದೆ.

ಇಡೀ ಜಗತ್ತನ್ನು ಧಾರಣೆ ಮಾಡಿರುವ ಜಗದ್ಧಾತ್ರೀ ಸಾಧಕನ ಶರೀರದ ಕಣಕಣವನ್ನೂ ಧಾರಣೆ ಮಾಡಿದ್ದಾಳೆ. **''ತ್ವಂ ಪರಮಾತ್ಮನಿ ಮೂಲಮಾಯಾ। ಛಾಯೇಶ್ವರಾಂತರ್ಗತ ಪುಮಾತ್ಮನಿ ಯೋಗಮಾಯಾ। ಸಮಸ್ತಸುರಭರ್ತರಿಜಾಲ ಮಾಯಾ। ಸಂಸಾರಾಸಕ್ತಹೃದಯೇಷು ಪಾಶಾಮಾಯಾ।''**

ಮೂಲಮಾಯೆಯಾದ ಮಹಾಮಾಯೆಯೇ ಮಾನವನ ಮನಸ್ಸಿನ ವಿವಿಧ ಸ್ತರಗಳಿಂದ ಬೇರಬೇರೆಯ ಸ್ವರೂಪದಲ್ಲಿ ಕಾಣುತ್ತಾಳೆ. ಯೋಗಿಗಳಿಗೆ ಅವಳು ಸಾಧಕ ಶಕ್ತಿ; ಯೋಗಮಾಯಾ ಸಂಸಾರಾಸಕ್ತರಿಗೆ ಮೋಹಜಾಲದ ಪಾಶಮಾಯೆ ಎಂಬುದನ್ನು ತಮ್ಮ ಪದಲಾಲಿತ್ಯದ ಸೊಗಸಿನಿಂದ ತಿಳಿಸಿದ್ದಾರೆ.

**''ನಭಸ್ತಲೇ ಬಲೇಶ್ವರಿ। ಧರಾತಲೇ ಕ್ರಿಯೇಶ್ವರಿ।**
**ದಿವಾಕರೇ ವಿಭೇಶ್ವರಿ। ಸುಧಾಕರೇ ರಸೇಶ್ವರಿ।''**
**''ಅಂಬರದೇಶೇ ಶಬ್ದವತೀ। ವಾಯುರ್ವಲಯೇ ಸ್ಪರ್ಶವತೀ**
**ಕಾಂಚನವೀರ್ಯೇ ರೂಪವತಿ। ಅಪ್ಸು ಪ್ರವಾಹೇ ರಸವತೀ**
**ಸಾಗರ ಕಾಂಚ್ಯಾ ಗಂಧವತಿ ।।''**

ಮೇಲಿನ ಶ್ಲೋಕಗಳಲ್ಲಿ ಪಂಚತನ್ಮಾತ್ರ ಸ್ವರೂಪಿಣಿಯಾದ ಭಗವತಿ ಗಗನದಲ್ಲಿ ಶಬ್ದವಾಗಿ, ಸುಳಿವ ಗಾಳಿಯಲ್ಲಿ ಸ್ಪರ್ಶವಾಗಿ ಜ್ವಲಿಸುವ ಅಗ್ನಿಯಲ್ಲಿ ಸಾಕಾರ ರೂಪಳಾಗಿ, ಹರಿಯುವ ನದಿಯಲ್ಲಿ ರಸರೂಪಳಾಗಿ ಸಾಗರವೇ ಒಡಾಣ್ಯವಾಗಿರುವ ಭೂಮಾತೆಯಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಸಹಿತಳಾಗಿ ಪಂಚಮಾತೃಕಾ ಎನಿಸಿದ್ದಾಳೆ. ಕ್ಷೇತ್ರಸ್ವರೂಪಾ, ಕ್ಷೇತ್ರೇಶಿ, ಕ್ಷೇತ್ರಜ್ಞಪಾಲಿನಿಯಾದ ಮಹಾಮಾತೆಯನ್ನು ನಿಜವಾದ ಸಾಧಕರು ಎಲ್ಲೆಲ್ಲಿಯೂ ಯಾವಾಗಲೂ ಕಾಣಬಲ್ಲರು. **''ಅರ್ಚನಕಾಲೇ ರೂಪಗತಾ । ಸಂಸ್ತುತಿಕಾಲೇ ಶಬ್ದಗತಾ । ಚಿಂತನಕಾಲೇ ಆತ್ಮಗತಾ । ತತ್ವವಿಚಾರೇ ಸರ್ವಗತಾ ।''**

''ಉಮಾಸಹಸ್ರಂ'' ಸಹಸ್ರಧಾರೆ ಸಹಸ್ರತೀರ್ಥಧಾರೆ, ಶ್ರೀ ರಮಣಮಹರ್ಷಿಗಳಿಂದ, ಗಣಪತಿ ಮುನಿಯವರಲ್ಲಿ ಹರಿದು ಬಂದ ತಪೋಧಾರೆ. **'ರಮಣಮಹರ್ಷಿ ಪ್ರಾಪ್ತಮಿದಂ ಗುರುಕೃಪಾದೃಷ್ಟಿಃ ಪ್ರಾಪ್ತಮಿದಂ । ಉಮಾಹೈಮವತೀ ಸಾಕ್ಷಾತ್ಕಾರಂ'** ಎಂದು ಋಷಿಕವಿ ಭಕ್ತಿಪೂರ್ವಕವಾಗಿ ನಮಿಸಿ, ಜಗನ್ಮಾತೆಯ ಕೃಪಾಕಟಾಕ್ಷವೇ ಶ್ರೀರಮಣಮಹರ್ಷಿಯ ಕೃಪಾಕಟಾಕ್ಷವಾಗಿ ಹರಿದಿದೆ ಎಂಬ ಸತ್ಯವನ್ನು ಮನಗಾಣಿಸಿದ್ದಾರೆ. ಈ ಸ್ತೋತ್ರ ಲಹರಿ ಧ್ಯಾನದಿಂದ – **''ಶಮಯತು ಪಾಪಂ । ದಮಯತು ದುಃಖಂ । ಹರತು ವಿಮೋಹಂ ಸ್ಫುಟಯತು ಬೋಧಂ । ಪ್ರಥಯತು ಶಕ್ತಿಂ ।।''**

''ಶ್ರೀಮಾತಾ ಶ್ರೀಚರಣಾಮರ್ಪಣಮಸ್ತು''